'ಆಂಡ್ರೆ ಡಿಯರ್, ಎಲ್ಲಿಗೆ ಹೊಗುತ್ತಿದ್ದೀಯಾ?'

'ಅಮ್ಮ, ನಾನಿನ್ನೂ ಹಾಲು ಕುಡಿಯೋ ಕೂಸಲ್ಲ' ಹುಬ್ಬು ಗಂಟಿಕ್ಕಿಕೊಂಡು ಅಂದ ಸ್ಟ್ರೆಶ್ನೆಫ್ ಕುದುರೆಯ ಲಗಾಮನ್ನು ಹಿಡಿದುಕೊಂಡ.

ಕಿಟಕಿ ಮುಚ್ಚಿಕೊಂಡಿತು. ಆದರೆ, ನಡುಮನೆಯಲ್ಲಿ ಬಾಗಿಲು ತೆರೆದ ಸದ್ದಾಯಿತು. ಪವೆಲ್ ಸ್ಟ್ರೇಶ್ನೆಫ್ ಚಪ್ಪಲಿ ಮೆಟ್ಟಿದ ಕಾಲುಗಳನ್ನು ಎಳೆದುಕೊಂಡು ಅಂಗಳಕ್ಕೆ ಬಂದು ನಿಂತ. ಅವನ ಮುಖ ಊದಿತ್ತು. ಕಣ್ಣುಗಳಿಗೆ ಮಬ್ಬು ಕವಿದಿತ್ತು. ಕಂದು ಬಣ್ಣದ ತಲೆಕೂದಲನ್ನು ಹಿಂದಕ್ಕೆ ಬಾಚಲಾಗಿತ್ತು. ಮೇಲಂಗಿ ಭುಜಗಳ ಹತ್ತಿರ ಹರಿದಿತ್ತು.

'ಎಲ್ಲಿಗೆ ಹೊರಟೆ, ಆಂಡ್ರೆ?' ಗಂಟಲು ಕಟ್ಟಿದ ದನಿಯಲ್ಲಿ ಅವನು ಕೇಳಿದ. 'ವಿಯರ ಅಲಿಕ್ಸೀವ್ನಾಗೆ ನನ್ನ ಅಭಿನಂದನೆಗಳನ್ನು ತಿಳಿಸು. ನಾನವಳನ್ನ ಸದಾ ಗೌರವಿಸುತ್ತೇನೆ.'

'ನೀನು ಯಾರನ್ನಾದರೂ ಗೌರವಿಸಬಲ್ಲೆಯಾ? ಹಾಗಿದ್ದಲ್ಲಿ ವಿನಾಕಾರಣ ಇತರರ ವಿಷಯದಲ್ಲಿ ಯಾಕೆ ಮೂಗು ತೂರಿಸುತ್ತೀಯಾ?' ಅಂದ ಸ್ಟ್ರೆಶ್ನೆಫ್.

'ತಪ್ಪಾಯ್ತು, ತಪ್ಪಾಯ್ತು. ರಹಸ್ಯ ಕೂಡುದಾಣದತ್ತ ಸಾಗುತ್ತಿದೆ ವಿರಹ ವೇದನೆಯ ರಸಿಕ ಮನಸ್ಸು...' ಅಂದ ಪವೆಲ್.

ಬಲವಾಗಿ ಹಲ್ಲು ಕಡಿಯುತ್ತಾ ಸ್ಟ್ರೆಶ್ನೆಫ್ ಕುದುರೆಯನ್ನು ಹತ್ತತೊಡಗಿದ. ಅವನ ಕಾಲು ರಿಕಾಪಿಗೆ ಸೋಕಿದ ತಕ್ಷಣ ಎಚ್ಚರಗೊಂಡ ಕುದುರೆ, ಒಡ್ಡೊಡ್ಡಾಗಿ ಹಿಂಗಾಲುಗಳನ್ನೆತ್ತಿ ನೆಗೆಯತೊಡಗಿತು. ಸ್ಟ್ರೆಶ್ನೆಫ್ ಅನಾಯಾಸವಾಗಿ ಕುದುರೆಯ ಮೇಲೆ ಹತ್ತಿ ಜೀನಿನ ತಡಿ ಕಮಾನಿನ ಮೇಲೆ ಕಾಲಿಟ್ಟು ಕೂತ. ಕುದುರೆ ಕತ್ತನ್ನು ಮೇಲಕ್ಕೆತ್ತಿಕೊಂಡು, ಗೊರಸುಗಳಿಂದ ಕೆಸರು ಗುಂಡಿಯೊಳಗಿದ್ದ ಚಂದ್ರನನ್ನು ಬಲವಾಗಿ ಅಪ್ಪಳಿಸಿಕೊಂಡು, ಚುರುಕು ಹೆಜ್ಜೆಗಳಿಂದ ಜಗ್ಗಿ ನಡೆಯತೊಡಗಿತು.

## 2

ತೆವರುಗಳಲ್ಲಿ ತೇವವಿತ್ತು. ಮಾಚಿಪತ್ರೆ ಗಿಡಗಳೊಂದಿಗೆ ಚಂದ್ರನ ಬೆಳಕು ಹೊದ್ದಿದ್ದ ಬಯಲುಗಳು ಮಸುಕಾಗಿದ್ದವು. ದೊಡ್ಡ ದೊಡ್ಡ ರೆಕ್ಕೆಗಳನ್ನು ಬಿಚ್ಚಿಕೊಂಡು ತೆವರುಗಳಲ್ಲಿ ಕೂತಿದ್ದ ಗೂಬೆಗಳು, ಚಕ್ಕನೆ ಸದ್ದಿಲ್ಲದಂತೆ ಎತ್ತರಕ್ಕೆ ಹಾರಿದವು. ಕುದುರೆ ಬುಸುಗುಟ್ಟಿ ಬೆದರಿತು. ತೆಳು ಕಾಡಿನ ನಡುವೆ ಹರಿದಿದ್ದ ರಸ್ತೆ, ನಿರ್ಜನವಾಗಿದ್ದುದರ ಜೊತೆಗೆ ಚಂದ್ರನ ಬೆಳಕು ಮತ್ತು ಹಿಮದಿಂದಾಗಿ ತಣ್ಣಗೆ ಕೊರೆಯುತ್ತಿತ್ತು. ಬೆಳಗುತ್ತಿದ್ದ, ಹೊಳೆವ ಮೇಲ್ಮೈನ ಚಂದ್ರ ಬೋಳು ಮರದ ತುದಿಗಳಲ್ಲಿ ಪ್ರತಿಫಲಿಸುತ್ತಿದ್ದ ಹಾಗೂ ಬೋಳು ರೆಂಬೆಗಳು ಮಳೆಗಾಲದ ತೇವದ ಮಿನುಗಿನೊಳಗೆ ಲೀನವಾಗಿ ಕಾಣದಂತಾಗಿದ್ದವು. ಆಸ್ಪ್ ಮರದ ತೊಗಟೆಯ ಹಾಗೂ ಕೊರಕಲು ಕಾಲುವೆಗಳೊಳಗಿನ ಸತ್ತ ಎಲೆಗಳ ಕಡು ವಾಸನೆ ಅಲ್ಲಿ ಅಡರಿಕೊಂಡಿತ್ತು.

ಅನಂತರ ಹುಲ್ಲುಮಾಳದೊಳಗೆ ತಳವೇ ಇಲ್ಲವೇನೋ ಎಂಬಂತೆ ಕಾಣುತ್ತಿದ್ದ ಬಿಳಿಯ ಹಬೆಯಿಂದ ಮುಳುಗಿಹೋಗಿದ್ದ ಇಳುಕಲು ಶುರುವಾಗುತ್ತದೆ. ಕುದುರೆ ಆ ಬಿಳಿಯ ಹಬೆಯನ್ನು ಉಸಿರಾಡುತ್ತಾ ಹಿಮ ಮಣಿಗಳಿಂದ ಬೆಳಗುತ್ತಿದ್ದ ಪೊದೆಗಳ ನಡುವೆ ದಾರಿಮಾಡಿಕೊಂಡು ನಡೆಯುತ್ತಿತ್ತು. ಅದರ ಗೊರಸುಗಳಡಿಯಲ್ಲಿ ಆಗುತ್ತಿದ್ದ ಸಣ್ಣ ಪುಟ್ಟ ರೆಂಬೆಗಳ ಚಟ ಪಟ ಸದ್ದು ಎದುರಿನ ಪರ್ವತದ ಇಳಿಜಾರಿಗೆ ನೆರಳಿನ ಚಾದರ ಹೊದಿಸಿದ್ದ ಉದ್ದನೆಯ ಕಾಡಿನೊಳಗೆ ಮರುದನಿಗೈಯ್ಯುತ್ತಿತ್ತು. ದಪ್ಪ ಕುತ್ತಿಗೆಯ ಮತ್ತು ಸಣ್ಣ ಕಾಲುಗಳ ದಡಿ ತೋಳಗಳೆರಡು ಹುಲ್ಲುಮಾಳದ ಮಸುಕಿನೊಳಗೆ ನಿಂತಿರುವುದ ಕಂಡ ಕುದುರೆ ಇದ್ದಕ್ಕಿದ್ದಂತೆ ಚಕ್ಕನೆ ಕಿವಿ ನಿಮಿರಿಸುತ್ತದೆ. ಅವು ಸ್ಟ್ರೆಶ್ನೆಫ್ ಹತ್ತಿರ ಬರುವವರೆಗೂ ಸುಮ್ಮನಿದ್ದು, ಇನ್ನೇನು ಬಂದೇ ಬಿಟ್ಟ ಅನ್ನುತ್ತಿದ್ದಂತೆ, ಹಾರುಗಾಲಿನಲ್ಲಿ ಅಡ್ಡಾದಿಡ್ಡಿ